# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 2404922
E-mail : aeehtgmys@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.) ರವರ ಕಛೇರಿ
ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪ-ವಿಭಾಗ, ಹೂಟಗಳ್ಳಿ,
ಮೈಸೂರು.

ಕ್ರ.ಸಂ: ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಹೂ/30889-10 ದಿನಾಂಕ : 07.02.2020

## ಸಭಾ ನಡಾವಳಿ

**ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ರವರ ಅಧ್ಯಕ್ಷತೆಯಲ್ಲಿ 06.02.2020 ರಂದು ಬೆಳಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯನ್ನು ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಕುರಿತು ನಡೆದ ಸಭಾ ನಡಾವಳಿ.**

**ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು :-**

1. ಶ್ರೀಯುತ ಚಿಕ್ಕಸಿದ್ದೇಗೌಡರು ರವರು, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ, ವಿ.ವಿ.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ, ಮೈಸೂರು.
2. ಶ್ರೀ. ಉಮೇಶ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪವಿಭಾಗ, ಮೈಸೂರು.
3. ಶ್ರೀಮತಿ ಮಂಜುಳಾ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಉಪವಿಭಾಗ, ಮೈಸೂರು
4. ಶ್ರೀ ಮಂಜುನಾಥ, ಸಹಾಯಕ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ,
5. ಶ್ರೀ ಸಂದೀಪ್, ಸಹಾಯಕ ಇಂಜಿನಿಯರ್(ವಿ), ಬೋಗಾದಿ ಶಾಖೆ.
6. ಶ್ರೀ ರಾಘವೇಂದ್ರ, ಕಿರಿಯ ಇಂಜಿನಿಯರ್(ವಿ), ಇಲವಾಲ ಶಾಖೆ.
7. ಶ್ರೀ ನಾಗೇಂದ್ರ, ಕಿರಿಯ ಇಂಜಿನಿಯರ್(ವಿ), ಬೀರಿಹುಂಡಿ ಶಾಖೆ.
8. ಶ್ರೀ. ಸೋಮಶೇಖರ್, ಕಿರಿಯ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ.
9. ಶ್ರೀ ಶಿವಪ್ರಸಾದ್, ಕಿರಿಯ ಇಂಜಿನಿಯರ್(ವಿ), ರೂಪನಗರ ಶಾಖೆ
10. ಶ್ರೀ ಪುಟ್ಟರಾಜ, ಸಹಾಯಕ ಲೆಕ್ಕಾಧಿಕಾರಿ, ಹೂಟಗಳ್ಳಿ ಉಪವಿಭಾಗ

**ಸಭೆಗೆ ಹಾಜರಿದ್ದ ಜನರು** : ಸಭೆಗೆ ಜನರು ಹಾಜರಾಗಿರುವುದಿಲ್ಲ.

*********

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿ ಹಾಗೂ ನೌಕರರನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಿದ್ಯುತ್ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದನ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಜನಸಂಪರ್ಕ ಸಭೆಯನ್ನು ನಡೆಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ದಿನಾಂಕ : 13.11.2019 ರಂದು ನಡೆದ ಸಭೆಯಲ್ಲಿ ಸ್ವೀಕರಿಸಿದ ದೂರುಗಳು : 6

ದಿನಾಂಕ : 06.02.2020 ರಂದು ಸ್ವೀಕೃತವಾದ ದೂರಿನ ಸಂಖ್ಯೆ : 0

...2...

Recd on 29.2.20

Scanned with CamScanner

ದಿನಾಂಕ : 13.11.2019 ರಂದು ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ವಿವರಿಸಿದರು.

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ತೆಗೆದುಕೊಂಡ ಕ್ರಮ |
|---|---|---|---|
| 1. | ಶ್ರೀ ಪದ್ಮೇಗೌಡ, ಎನ್.ಜೆ.ಆಸ್ಪತ್ರೆ, ಇಲವಾಲ ಮೈಸೂರು | ▪ ಇವರು ತಮ್ಮ ಸ್ಥಾವರದ ಮುಂದಿರುವ ಕಂಬವನ್ನು ಸ್ಥಳಾಂತರಿಸಲು ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಸೂಚಿಸಿದರು. ಇದಕ್ಕೆ ಶಾಖಾಧಿಕಾರಿಯವರು ಉತ್ತರಿಸಿ, ಈಗಾಗಲೇ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿರುವುದೆಂದು ತಿಳಿಸಿರುತ್ತಾರೆ. |
| 2. | ಶ್ರೀ ವೈಕುಂಠಪ್ಪ, ಎಂ.ಆರ್.ಆರ್ ಲೇಔಟ್ ನಿವಾಸಿಗಳು, ಮೈಸೂರು | ▪ ಈ ಬಡಾವಣೆಯ ನಿವಾಸಿಗಳು ತಮ್ಮ ಬಡಾವಣೆಯಲ್ಲಿ ಯು.ಜಿ. ಕೇಬಲ್ ಮುಖಾಂತರ ವಿದ್ಯುದೀಕರಣಗೊಂಡಿದ್ದು, ಯು.ಜಿ.ಕೇಬಲ್ ಇರುವುದರಿಂದ ಮಾರ್ಗಗಳ ತೊಂದರೆ(Line Trable) ಯದಾಗ ನಿರ್ವಹಣೆ ಕಾರ್ಯವು ವಿಳಾಂಬವಾಗುತ್ತಿರುತ್ತದೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸಿ, ಕೆ.ಇ.ಆರ್.ಸಿ ನಿಯಮಾನುಸಾರ ಶೇ.25% ಮನೆ ನಿರ್ಮಾಣವಾಗದ ಕಾರಣ ಬಡಾವಣೆಯವರೇ ನಿರ್ವಹಣೆ ಮಾಡಬೇಕಾಗಿರುತ್ತದೆ. ಸದರಿ ಬಡಾವಣೆಯ ಮಾಲೀಕರಿಗೆ ಸೂಕ್ತ ಕ್ರಮ ಕೈಗೊಳ್ಳು ಸೂಚಿಸಲಾಗಿದೆ. |
| 3 | ಪಂಚಾಚಾರ್ಯ ಲೇಔಟ್ ನಿವಾಸಿಗಳು, ಮೈಸೂರು | ▪ ಈ ಬಡಾವಣೆಯು ಇಲವಾಲ ಶಾಖಾ ವ್ಯಾಪ್ತಿಗೆ ಸೇರಿದ್ದು, ಸದರಿ ಶಾಖೆಯು ಬಡಾವಣೆಯಿಂದ ದೂರ ಇರುವುದರಿಂದ ಗ್ರಾಹಕರಿಗೆ ಅನುಕೂಲವಾಗುವಂತೆ ಹೂಟಗಳ್ಳಿ ಶಾಖಾ ವ್ಯಾಪ್ತಿಗೆ ಸೇರಿಸಬೇಕಾಗಿ ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸಿ, ಈಗಾಗಲೇ ಹೂಟಗಳ್ಳಿ ಉಪವಿಭಾಗದ ಇಲವಾಲ ಶಾಖಾ ವ್ಯಾಪ್ತಿಗೆ ಸೇರಿದ್ದು, ಗ್ರಾಹಕರಿಗೆ ಅನುಕೂಲವಾಗುವಂತೆ 24 X 7 |

Scanned with CamScanner

| | | | |
|---|---|---|---|
| 4 | ಪಂಚಾಮುಖಿ ಲೇಔಟ್ ನಿವಾಸಿಗಳು, ಮೈಸೂರು. | ▪ ಈ ಬಡಾವಣೆಯು ಇಲವಾಲ ಶಾಖಾ ವ್ಯಾಪ್ತಿಗೆ ಸೇರಿದ್ದು, ಸದರಿ ಶಾಖೆಯು ಬಡಾವಣೆಯಿಂದ ದೂರ ಇರುವುದರಿಂದ ಗ್ರಾಹಕರಿಗೆ ಅನುಕೂಲವಾಗುವಂತೆ ಹೂಟಗಳ್ಳಿ ಶಾಖಾ ವ್ಯಾಪ್ತಿಗೆ ಸೇರಿಸಬೇಕಾಗಿ ಕೋರಿರುತ್ತಾರೆ. | ಸೇವಾ ಕೇಂದ್ರವನ್ನು ನೀಡಲಾಗಿರುತ್ತದೆ ಎಂದು ತಿಳಿಸಲಾಗಿದೆ. |
| 5 | ಜವರೇಗೌಡ ಹಾಗೂ ಪ್ರಕಾಶ ಲೇಔಟ್, # 370/2, ಎಸ್.ಬಿ.ಇ.ಐ ಶಾಲೆಯ ಹತ್ತಿರ, ಬೆಳವಾಡಿ, ಮೈಸೂರು | ▪ ಈ ಬಡಾವಣೆಯು ಇಲವಾಲ ಶಾಖಾ ವ್ಯಾಪ್ತಿಗೆ ಸೇರಿದ್ದು, ಸದರಿ ಶಾಖೆಯು ಬಡಾವಣೆಯಿಂದ ದೂರ ಇರುವುದರಿಂದ ಗ್ರಾಹಕರಿಗೆ ಅನುಕೂಲವಾಗುವಂತೆ ಹೂಟಗಳ್ಳಿ ಶಾಖಾ ವ್ಯಾಪ್ತಿಗೆ ಸೇರಿಸಬೇಕಾಗಿ ಕೋರಿರುತ್ತಾರೆ.<br>▪ ಮನೆ ನಂ. 007, ಜಯಮ್ಮ ನಿಲಯ ಇವರ ಮನೆಯ ಮುಂಭಾಗವಿರುವ ಪರಿವರ್ತಕವನ್ನು ಸ್ಥಳಾಂತರಿಸಬೇಕಾಗಿ ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸಿ, ಈಗಾಗಲೇ ಹೂಟಗಳ್ಳಿ ಉಪವಿಭಾಗದ ಇಲವಾಲ ಶಾಖಾ ವ್ಯಾಪ್ತಿಗೆ ಸೇರಿದ್ದು, ಗ್ರಾಹಕರಿಗೆ ಅನುಕೂಲವಾಗುವಂತೆ 24 X 7 ಸೇವಾ ಕೇಂದ್ರವನ್ನು ನೀಡಲಾಗಿರುತ್ತದೆ ಎಂದು ತಿಳಿಸಿಲಾಗಿದೆ.<br>▪ ಶಾಖಾಧಿಕಾರಿಯವರು ಸ್ಥಳ ಪರಿಶೀಲಿಸಿ, ಗ್ರಾಹಕರಿಗೆ ಸ್ವಯಂ ಕಾರ್ಯನಿರ್ವಾಹಣೆ ಯೋಜನೆಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲಾಗುವುದು, ಈ ಸಂಬಂಧ ತಾವು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಪತ್ರ ಮುಖೇನಾ ವಿನಂತಿಸುವಂತೆ ಸೂಚಿಸಿರುತ್ತಾರೆ. |
| 6 | ಶ್ರೀ ಶಿವಮೂರ್ತಿ ಬೆಳವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಇಲವಾಲ ಹೋಬಳಿ, ಮೈಸೂರು | ▪ ಇಲವಾಲ ಶಾಖೆಯನ್ನು ಮರು ನಾಮಕರಣಗೊಳಿಸಿ ಬೆಳವಾಡಿ ಶಾಖೆ ಎಂದು ಮಾಡಬೇಕಾಗಿ ಬೆಳವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸಿ, ಈ ವಿಷಯದ ಬಗ್ಗೆ ಮೇಲಾಧಿಕಾರಿಯವರಿಗೆ ತಿಳಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರಿಸಿದರು. |

...3...

Scanned with CamScanner

ದಿನಾಂಕ : 06.02.2020 ರಂದು ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ.

ಮುಂದುವರೆದು, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉಪವಿಭಾಗದ ಅಧಿಕಾರಿಗಳಿಗೆ, ಗ್ರಾಹಕರ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ, ಸಮಸ್ಯೆಗಳನ್ನು ಪರಿಹರಿಸಿ ಮತ್ತು ಸೇವೆಯನ್ನು ಉನ್ನತೀಕರಿಸಲು ಉತ್ತಮ ಸಲಹೆ ನೀಡಲು ಸೂಚಿಸಿದರು. ಹಾಗೂ ಭಾಗವಹಿಸಿದ ಎಲ್ಲಾ ಅಧಿಕಾರಿಯವರಿಗೆ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಹೂಟಗಳ್ಳಿ ಉಪವಿಭಾಗ,
ಮೈಸೂರು.

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಿಭಾಗ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ

Scanned with CamScanner